## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಸಿ.ಟಿ.ರವಿ
(ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 822

ಉತ್ತರಿಸಬೇಕಾದ ದಿನಾಂಕ : 19-08-2025

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2023-24ನೇ ಸಾಲಿನ ಬಜೆಟ್‌ನಲ್ಲಿ ಶೂನ್ಯ ಬಡ್ಡಿ ರಹಿತ ಅಲ್ಪಾವಧಿ ಕೃಷಿ ಸಾಲವನ್ನು ಹೆಚ್ಚಳ ಮಾಡುವ ಘೋಷಣೆ ಮಾಡಲಾಗಿದ್ದು, ಈ ಕುರಿತು ಆದೇಶ ಹೊರಡಿಸಲಾಗಿದೆಯೇ; (ಆದೇಶದ ಪ್ರತಿ ನೀಡುವುದು) | 2023-24ನೇ ಸಾಲಿನಲ್ಲಿ ಶೂನ್ಯ ಬಡ್ಡಿ ದರದ ಅಲ್ಪಾವಧಿ ಕೃಷಿ ಸಾಲದ ಮಿತಿಯನ್ನು ರೂ.3.00 ಲಕ್ಷದಿಂದ ರೂ.5.00 ಲಕ್ಷದವರೆಗೆ ಹೆಚ್ಚಳ ಮಾಡಿ, ಸರ್ಕಾರ ಆದೇಶ ಹೊರಡಿಸಿದೆ. ಆದೇಶದ ಪ್ರತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ರೈತರಿಗೆ ಬಡ್ಡಿ ರಹಿತ ಕೃಷಿ ಸಾಲ ನೀಡಲು ಸರ್ಕಾರ ವಿಧಿಸಿರುವ ಮಾನದಂಡಗಳೇನು; ಎಷ್ಟು ರೈತರಿಗೆ ಸಾಲ ನೀಡುವ ಗುರಿ ಹೊಂದಲಾಗಿತ್ತು; | ರೈತರಿಗೆ ಬಡ್ಡಿ ರಹಿತ ಕೃಷಿ ಸಾಲ ವಿತರಿಸಲು ನಿಗದಿಪಡಿಸಿರುವ ಮಾನದಂಡಗಳ ಕುರಿತು ಹೊರಡಿಸಿರುವ ಆದೇಶದ ಪ್ರತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಜಿಲ್ಲಾ ಸಹಕಾರ ಬ್ಯಾಂಕುಗಳು ನಬಾರ್ಡ್‌ನಿಂದ ದೊರೆಯುವ ಪುನರ್ಧನ ಮತ್ತು ತಮ್ಮ ಬಂಡವಾಳದ ಲಭ್ಯತೆ ಆಧರಿಸಿ ರೈತರಿಗೆ ಸಾಲ ಮಂಜೂರು ಮಾಡಲಾಗುತ್ತದೆ.<br><br>2023-24 ನೇ ಸಾಲಿಗೆ ರೂ.5.00 ಲಕ್ಷದವರೆಗಿನ 34.40 ಲಕ್ಷ ರೈತರಿಗೆ ಸಾಲ ವಿತರಿಸುವ ಗುರಿಯನ್ನು ಸರ್ಕಾರದಿಂದ ನಿಗದಿಪಡಿಸಿದ್ದು, ಈ ಪೈಕಿ ಜಿಲ್ಲಾ ಸಹಕಾರ ಬ್ಯಾಂಕುಗಳು ರೈತರು ಹೊಂದಿರುವ ಭೂ ಹಿಡುವಳಿ ಮತ್ತು ರಾಜ್ಯ ಮಟ್ಟದ ತಾಂತ್ರಿಕ ಸಮಿತಿ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಆಧಾರವಾಗಿ ರೈತರ ಅರ್ಹತೆ ಆಧರಿಸಿ ರೂ.3.00 ಲಕ್ಷದಿಂದ ರೂ.5.00 ಲಕ್ಷದವರೆಗೆ 72,461 ರೈತರಿಗೆ ಸಾಲ ವಿತರಿಸಲು ಗುರಿ ನಿಗದಿಪಡಿಸಿಕೊಂಡಿದ್ದವು. |

| | | |
|---|---|---|
| ಇ) | ಕಳೆದ 2 ವರ್ಷದಿಂದ ಸದರಿ ಯೋಜನೆಯಿಂದ ಎಷ್ಟು ರೈತರಿಗೆ ಕೃಷಿ ಸಾಲ ನೀಡಲಾಗಿದೆ; ಎಷ್ಟು ರೈತರು ಸಾಲ ಮರುಪಾವತಿ ಮಾಡಿದ್ದಾರೆ; (ವರ್ಷವಾರು /ಜಿಲ್ಲಾವಾರು ವಿವರ ಒದಗಿಸುವುದು) | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಡಿಸಿಸಿ ಬ್ಯಾಂಕುಗಳ ಮೂಲಕ ರೂ.3.00 ಲಕ್ಷದಿಂದ ರೂ.5.00 ಲಕ್ಷಗಳವರೆಗೆ 2023-24ನೇ ಸಾಲಿನಲ್ಲಿ 8859 ರೈತರಿಗೆ ಮತ್ತು 2024-25 ನೇ ಸಾಲಿನಲ್ಲಿ 16,043 ರೈತರಿಗೆ ಸಾಲ ನೀಡಲಾಗಿರುತ್ತದೆ.<br><br>2023-24 ನೇ ಸಾಲಿನಲ್ಲಿ ವಿತರಿಸಿದ ಸಾಲದ ಪೈಕಿ 8755 ರೈತರು ಸಾಲ ಮರುಪಾವತಿಸಿರುತ್ತಾರೆ. 2024-25ನೇ ಸಾಲಿನಲ್ಲಿ ವಿತರಿಸಿದ ಸಾಲವನ್ನು ಮರುಪಾವತಿಸಲು ಗರಿಷ್ಟ ಒಂದು ವರ್ಷಗಳ ಕಾಲಾವಕಾಶ ಇರುತ್ತದೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಈ) | ಸಕಾಲದಲ್ಲಿ ಸಾಲ ಮರುಪಾವತಿ ಮಾಡಿರುವ ರೈತರಿಗೆ ಸರ್ಕಾರ ಬಡ್ಡಿ ರಿಯಾಯಿತಿ ನೀಡಿದೆಯೇ; ಎಷ್ಟು ರೈತರು ಬಡ್ಡಿ ರಿಯಾಯಿತಿ ಲಾಭ ಪಡೆದಿದ್ದಾರೆ? (ಜಿಲ್ಲಾವಾರು ವಿವರ ನೀಡುವುದು) | ರೂ.5.00 ಲಕ್ಷಗಳವರೆಗೆ ಸಾಲ ಪಡೆದು ಸಕಾಲದಲ್ಲಿ ಮರುಪಾವತಿಸಿದ ರೈತರು ಯಾವುದೇ ಬಡ್ಡಿಯನ್ನು ಸಹಕಾರ ಸಂಘಗಳಿಗೆ ಪಾವತಿಸಬೇಕಿರುವುದಿಲ್ಲ. ರೈತರ ಪರವಾಗಿ ಸಹಕಾರ ಸಂಘಗಳಿಗೆ ಶೇ.9.5 ರ ಬಡ್ಡಿ ಸಹಾಯಧನ ದರ ನಿಗದಿಪಡಿಸಿದ್ದು, ಈ ಮೊತ್ತವನ್ನು ಬ್ಯಾಂಕುಗಳಿಗೆ ಸರ್ಕಾರದಿಂದ ನೀಡಲಾಗುತ್ತದೆ.<br><br>2023-24 ನೇ ಸಾಲಿನಲ್ಲಿ ಸಾಲ ಪಡೆದು ನಿಗದಿತ ಅವಧಿಯೊಳಗೆ ಮರುಪಾವತಿಸಿದ 8755 ರೈತರು ಬಡ್ಡಿ ರಿಯಾಯಿತಿ ಲಾಭ ಪಡೆದಿರುತ್ತಾರೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ಕಡತ ಸಂಖ್ಯೆ: ಸಿಒ 226 ಸಿಎಲ್‌ಎಸ್ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ-1

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 2023-24ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.5.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ ದುಡಿಯುವ ಬಂಡವಾಳ ಸಾಲ ವಿತರಿಸುವ ಬಗ್ಗೆ.

ಓದಲಾಗಿದೆ 1. 2023-24 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ:65ಕ್ಕೆ ಸಂಬಂಧಿಸಿದಂತೆ ( 7ನೇ ಜುಲೈ 2023)

2. ಸರ್ಕಾರದ ಆದೇಶ ಸಂಖ್ಯೆ: ಸಿಒ 150 ಸಿಎಲ್ಎಸ್ 2022, ದಿನಾಂಕ:08.04.2022.

3. ಸಹಕಾರ ಸಂಘಗಳ ನಿಬಂಧಕರ ಕಚೇರಿ ಪತ್ರ ಸಂಖ್ಯೆ: ಸಿಆರ್ ಡಿ/ ಸಿಎಬಿ-1/ 20/2023-24, ದಿನಾಂಕ:02.08.2023

****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1) ರಲ್ಲಿ 2023-24ನೇ ಸಾಲಿನ ಜುಲೈ 07ನೇ ತಾರೀಖಿನಂದು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ ಆಯವ್ಯಯ ಭಾಷಣದ ಕಂಡಿಕೆ-65 ರಲ್ಲಿ **"ರಾಜ್ಯದ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ನೀಡುತ್ತಿರುವ ಅಲ್ಪಾವಧಿ ಸಾಲದ ಮಿತಿಯನ್ನು ಮೂರು ಲಕ್ಷ ರೂ. ಗಳಿಂದ ಐದು ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು. ಅದೇ ರೀತಿ ಶೇ. 3 ರ ಬಡ್ಡಿದರದಲ್ಲಿ ನೀಡುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಮಿತಿಯನ್ನು 10 ಲಕ್ಷ ರೂ.ಗಳಿಂದ 15 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು. ಪ್ರಸಕ್ತ ಸಾಲಿನಲ್ಲಿ 35 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ 25,000 ಕೋಟಿ ರೂ.ಗಳಷ್ಟು ಸಾಲ ವಿತರಣೆ ಮಾಡುವ ಗುರಿ ಹೊಂದಲಾಗಿದೆ" ಎಂದು ಘೋಷಿಸಿರುತ್ತಾರೆ.**

ಮೇಲೆ ಓದಲಾದ ಕ್ರ.ಸಂ. (2) ರ ಸರ್ಕಾರದ ಆದೇಶದಲ್ಲಿ, 2022-23ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ಮತ್ತು ಗರಿಷ್ಠ ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ನೀಡುವ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರ.ಸಂ (3) ರ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ, 2023-24ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.5.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ ದುಡಿಯುವ ಬಂಡವಾಳ ಸಾಲ ವಿತರಿಸಲು ಗುರಿ ನಿಗದಿಪಡಿಸಿ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

--2



Scanned by CamScanner

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶ ಹೊರಡಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಸಿಒ 167 ಸಿಎಲ್ಎಸ್ 2023, ಬೆಂಗಳೂರು, ದಿನಾಂಕ:08.09.2023</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ರೈತರಿಗೆ ಸಹಕಾರಿ ಸಂಸ್ಥೆಗಳು ನಿವ್ವಳ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ಗರಿಷ್ಠ ರೂ.5.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲ ಮತ್ತು ಗರಿಷ್ಠ ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ನೀಡುವ ಯೋಜನೆಯನ್ನು ಕೆಳಕಂಡ ಷರತ್ತುಗಳೊಂದಿಗೆ ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

<u>ಷರತ್ತುಗಳು</u>

1. ಈ ಯೋಜನೆಯು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು, ಟಿಬೇಟಿಯನ್ ಸಹಕಾರ ಸಂಸ್ಥೆಗಳು, ಲ್ಯಾಂಪ್ಸ್ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ರೈತರಿಗೆ / ಮೀನುಗಾರರಿಗೆ ವಿತರಿಸುವ ಅಲ್ಪಾವಧಿ ಬೆಳೆ ಸಾಲ, ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲಗಳಿಗೆ ಅನ್ವಯಿಸುತ್ತದೆ.

2. ಈ ಯೋಜನೆಯು ಒಬ್ಬ ಫಲಾನುಭವಿಗೆ ಗರಿಷ್ಠ ರೂ.5.00 ಲಕ್ಷಗಳವರೆಗೆ ನೀಡುವ ಅಲ್ಪಾವಧಿ ಬೆಳೆ ಸಾಲ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆಗಾಗಿ ದುಡಿಯುವ ಬಂಡವಾಳ ಸಾಲಕ್ಕಾಗಿ ಗರಿಷ್ಠ ರೂ.2.00 ಲಕ್ಷಗಳವರೆಗೆ ವಿತರಿಸುವ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳಕ್ಕಾಗಿ ರೂ.2.00 ಲಕ್ಷದವರೆಗೆ ಸಾಲ ಪಡೆದು ಬೆಳೆ ಸಾಲ ಪಡೆಯಬೇಕಾದಲ್ಲಿ ಬೆಳೆ ಸಾಲ, ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಉದ್ದೇಶಕ್ಕೆ ಒಟ್ಟು ರೂ.5.00 ಲಕ್ಷಗಳಿಗೆ ಮೀರತಕ್ಕದ್ದಲ್ಲ.

3. ರೂ.5.00 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದಿದ್ದರೂ ಸಹ ರೂ.5.00 ಲಕ್ಷಗಳ ಹೊರಬಾಕಿಗೆ ರಿಯಾಯಿತಿ ಬಡ್ಡಿ ದರ ಅನ್ವಯವಾಗುತ್ತದೆ.

4. ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯಿಂದ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಮತ್ತು ಬೆಳೆ ವಿಮೆ ಆಧಾರದ ಮೇಲೆ ಮಂಜೂರಾದ ಸಾಲದ ಮಿತಿಗೆ ಮಾತ್ರ ಬಡ್ಡಿ ಸಹಾಯಧನ ಅನ್ವಯವಾಗುವುದು. ಕೊಯ್ಲು ನಂತರದ (Post Harvest) ಹಾಗೂ ಇತರೆ ಉದ್ದೇಶಗಳಿಗೆ ನೀಡುವ ಸಾಲಗಳಿಗೆ ಬಡ್ಡಿ ಸಹಾಯಧನ ಅನ್ವಯವಾಗುವುದಿಲ್ಲ.

5. 2023-24ನೇ ಸಾಲಿಗೆ ಬಡ್ಡಿ ಸಹಾಯಧನದ ದರವನ್ನು ನಿಗದಿಪಡಿಸುವವರೆಗೆ 2022-23ನೇ ಸಾಲಿಗೆ ನಿಗದಿಪಡಿಸಿರುವ ಬಡ್ಡಿ ಸಹಾಯಧನದ ದರಗಳು ಮುಂದುವರೆಯಲಿದ್ದು, ಸಾಲ ಒದಗಿಸುವ ಬ್ಯಾಂಕುಗಳು ತಮ್ಮ ಅಧೀನ ಸಂಘಗಳಿಗೆ ಇದಕ್ಕೆ ಅನುಗುಣವಾಗಿ ಬಡ್ಡಿ ದರವನ್ನು ಆಕರಣೆ ಮಾಡತಕ್ಕದ್ದು ಮತ್ತು ನಂತರದಲ್ಲಿ ಬದಲಾವಣೆಯಾಗುವ ಬಡ್ಡಿಸಹಾಯಧನ ದರಗಳಿಗೆ ಬದ್ಧರಾಗಿರತಕ್ಕದ್ದು. ರೂ.3 ಲಕ್ಷದಿಂದ ರೂ.5.00 ಲಕ್ಷಗಳ ವರೆಗಿನ ಸಾಲಗಳಿಗೆ ಬಡ್ಡಿದರ ಮತ್ತು ಬಡ್ಡಿ ಸಹಾಯಧನ ದರಗಳನ್ನು ಸಹ ನಂತರ ನಿಗದಿಪಡಿಸಲಾಗುವುದು.

6. ಬಡ್ಡಿ ಸಹಾಯಧನವು ಒಂದು ಸಹಕಾರ ಸಂಘದಲ್ಲಿ ಪಡೆದ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. ರೈತನ ವಾಸ ಸ್ಥಳ ಮತ್ತು ಭೂಮಿ ಒಂದೇ ಸಂಘದ ವ್ಯಾಪ್ತಿಯಲ್ಲಿದ್ದರೆ ಇತರೇ ಯಾವುದೇ ಸಂಘದ ಬೇ ಬಾಕಿ ಪತ್ರ ಪಡೆಯದೇ ಅದೇ ಸಂಘದಲ್ಲಿ ಸಾಲ ಪಡೆಯತಕ್ಕದ್ದು.

ರೈತನ ಭೂಮಿ ಮತ್ತು ವಾಸ ಸ್ಥಳ ಬೇರೆ ಬೇರೆ ಸಂಘದ ವ್ಯಾಪ್ತಿಯಲ್ಲಿದ್ದರೆ ಅಥವಾ ಎರಡು ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬೇರೆ ಬೇರೆ ಭೂಮಿ ಹೊಂದಿದ್ದರೆ, ರೈತನು ಸಾಲಕ್ಕಾಗಿ ಅರ್ಜಿ

–3

Scanned by CamScanner

ಸಲ್ಲಿಸಿದ ಸಂಘವು ರೈತನು ಹೊಂದಿರುವ ಒಟ್ಟಾರೆ ಭೂಮಿಯ ವಿವರವನ್ನು ಪಡೆದು, ವಾಸ ಸ್ಥಳದ ಸಂಘ ಮತ್ತು ರೈತನ ಇತರೆ ಭೂಮಿಯ ಸಂಘದಿಂದ ಬೇ ಬಾಕಿ ಪತ್ರ ಪಡೆದು ಅದೇ ಸಂಘದಲ್ಲಿ ಇತರೇ ಸಂಘದ ವ್ಯಾಪ್ತಿಯ ಭೂಮಿಗೂ ಸಹ ಸಾಲ ವಿತರಿಸಬಹುದಾಗಿದೆ ಮತ್ತು ಬೇ ಬಾಕಿ ಪತ್ರ ಪಡೆಯುವುದು ಸಂಘದ ಜವಾಬ್ದಾರಿಯಾಗಿರುತ್ತದೆ.

ವಾಸ ಸ್ಥಳವನ್ನು ನಿರ್ಧರಿಸಲು ಆಧಾರ್ ಕಾರ್ಡ್‌ನಲ್ಲಿರುವ ವಿಳಾಸವನ್ನು ಪರಿಗಣಿಸತಕ್ಕದ್ದು. ರೈತನು ನೆರೆ ರಾಜ್ಯದಲ್ಲಿ ವಾಸವಿದ್ದು, ಕರ್ನಾಟಕ ರಾಜ್ಯದಲ್ಲಿ ಭೂಮಿ ಇದ್ದರೆ, ಅಂತಹ ರೈತನಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

7. ರೈತರಿಗೆ ಸಾಲ ಮತ್ತು ಸಹಾಯಧನವನ್ನು ಅವರು ಡಿಸಿಸಿ ಬ್ಯಾಂಕ್ ಅಥವಾ ವಾಣಿಜ್ಯ ಬ್ಯಾಂಕಿನಲ್ಲಿ ಹೊಂದಿರುವ ಸಾಲ/ಉಳಿತಾಯ ಖಾತೆಯ ಮೂಲಕವೇ ವಿತರಿಸತಕ್ಕದ್ದು. ಸಾಲ ಮತ್ತು ಸಹಾಯಧನವನ್ನು ಸಂಘಗಳ ಹಂತದಲ್ಲಿ ನಗದು ಮೂಲಕ ಪಾವತಿಸುವುದನ್ನು ನಿರ್ಬಂಧಿಸಲಾಗಿದೆ.

8. ರಾಜ್ಯ ಸರ್ಕಾರದ /ಕೇಂದ್ರ ಸರ್ಕಾರದ ಬಡ್ಡಿ ಸಹಾಯಧನವನ್ನು ಪಡೆಯಲು ರೈತರ ಆಧಾರ್ ಕಾರ್ಡ್ ಸಂಖ್ಯೆಯನ್ನು ಪ್ಯಾಕ್ಸ್ ಸಂಯೋಜನೆಗೊಂಡಿರುವ ಬ್ಯಾಂಕಿನಲ್ಲಿರುವ ರೈತರ ಉಳಿತಾಯ ಖಾತೆಗೆ ಜೋಡಣೆ ಮಾಡತಕ್ಕದ್ದು. ಇದಕ್ಕಾಗಿ ತಮ್ಮ ಸಾಲದ ದಾಖಲೆಗಳಲ್ಲಿ ತಪ್ಪದೇ ಆಧಾರ ಕಾರ್ಡಿನ ನಕಲು ಪ್ರತಿ ಮತ್ತು ಆಧಾರ್ ಕಾರ್ಡ್ ಬಳಕೆಯ ಘೋಷಣಾ ಪತ್ರವನ್ನು ಪಡೆಯತಕ್ಕದ್ದು.

9. ರಾಜ್ಯ ಸರ್ಕಾರದಿಂದ ಸಹಕಾರ ಸಂಘಗಳು ನಿಗದಿಪಡಿಸಿದ ಗಡುವು ದಿನಾಂಕ ಅಥವಾ ಗರಿಷ್ಠ ಒಂದು ವರ್ಷ ಇದರಲ್ಲಿ ಯಾವುದು ಕಡಿಮೆಯೋ ಆ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ದೊರೆಯಲಿದ್ದು, ರೈತರು ಈ ದಿನಾಂಕದೊಳಗೆ ಸಾಲ ಮರುಪಾವತಿಸಿದಲ್ಲಿ ಮಾತ್ರ ಬಡ್ಡಿ ಸಹಾಯಧನಕ್ಕೆ ಅರ್ಹರಾಗುತ್ತಾರೆ. ಒಬ್ಬ ರೈತನಿಗೆ ಎರಡನೇ ಬಾರಿ ಹೆಚ್ಚುವರಿ ಸಾಲ ವಿತರಿಸಿದಲ್ಲಿ ಮೊದಲು ವಿತರಿಸಿದ ಸಾಲಕ್ಕೆ ಸಂಬಂಧಿಸಿದ ಗಡುವನ್ನೇ ನಿಗದಿಪಡಿಸತಕ್ಕದ್ದು.

10. ಈ ಬಡ್ಡಿದರವು **ದಿನಾಂಕ:01.04.2023 ರಿಂದ ದಿನಾಂಕ:31.03.2024**ರವರೆಗೆ ಮಂಜೂರು ಮಾಡಿ ವಿತರಿಸಿದ ಅಲ್ಪಾವಧಿ ಕೃಷಿ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ.

11. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸ್ಥಗಿತ/ಸಮಾಪನೆಗೊಂಡಿದ್ದಲ್ಲಿ ಹಾಗೂ ಬಂಡವಾಳ ಕೊರತೆಯುಂಟಾಗಿದ್ದರೆ, ಅಂತಹ ಕಾರ್ಯವ್ಯಾಪ್ತಿಯಲ್ಲಿನ ರೈತರಿಗೆ ಡಿಸಿಸಿ ಬ್ಯಾಂಕಿನ ಶಾಖೆಗಳ ಮೂಲಕ ಸಾಲ ವಿತರಿಸತಕ್ಕದ್ದು.

12. ಪತ್ತಿನ ಸಹಕಾರ ಸಂಘಗಳು/ಬ್ಯಾಂಕುಗಳು ತಮಗೆ ದೊರೆಯಬೇಕಾದ ಬಡ್ಡಿ ಸಹಾಯಧನದ ಮತ್ತು ರೈತರಿಗೆ ದೊರೆಯಬೇಕಾದ ಬಡ್ಡಿ ಪ್ರೋತ್ಸಾಹಧನದ ಬಿಲ್ಲುಗಳನ್ನು ಪ್ರತಿ ತ್ರೈಮಾಸಿಕವಾಗಿ ಸಾಲ ವಸೂಲಾತಿ ಆಧಾರವಾಗಿ ತಯಾರಿಸತಕ್ಕದ್ದು.

13. ಈ ಬಿಲ್ಲುಗಳನ್ನು ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕರು ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಶೇ.100ರಷ್ಟು ಬಿಲ್ಲುಗಳನ್ನು ದೃಢೀಕರಿಸಿ, ನಂತರ ಡಿಸಿಸಿ ಬ್ಯಾಂಕುಗಳು ಕ್ರೋಢೀಕರಿಸಿ, ಜಿಲ್ಲಾ ಉಪ ನಿಬಂಧಕರು ಮತ್ತು ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇ.5ರಷ್ಟು ಸಂಘಗಳ ಶೇ.10 ಖಾತೆಗಳನ್ನು ಪರಿಶೀಲಿಸಿ, ದೃಢೀಕರಿಸಿದ ನಂತರ ಅಪೆಕ್ಸ್ ಬ್ಯಾಂಕ್ ಮೂಲಕ ನಿಬಂಧಕರಿಗೆ ಸಲ್ಲಿಸತಕ್ಕದ್ದು.

14. ನಿಬಂಧಕರು ಇದರ ಆಧಾರದ ಮೇಲೆ ಸರ್ಕಾರದಿಂದ ಅನುದಾನ ಪಡೆದು ಸಹಕಾರ ಸಂಘಗಳಿಗೆ ಬಿಡುಗಡೆ ಮಾಡತಕ್ಕದ್ದು, ಮತ್ತು ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

15. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಿಲ್ಲುಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡುವ ಬಡ್ಡಿ ಸಹಾಯಧನದ ರೈತವಾರು ಮಾಹಿತಿಯನ್ನು ಸಮಾಜ ಕಲ್ಯಾಣ ಇಲಾಖೆಯ

--4

Scanned by CamScanner

ವೆಬ್ ಸೈಟ್ sw.kar.nic.in ನಲ್ಲಿ ಪ್ರತಿ ತಾಲ್ಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿದ ಲಾಗಿನ್ ಬಳಸಿ ಒಂದು ತಿಂಗಳೊಳಗಾಗಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಇದಕ್ಕಾಗಿ ಸರ್ಕಾರದಿಂದ ರೈತರ ಖಾತೆಗೆ/ಸಹಕಾರ ಸಂಘಗಳಿಗೆ ಬಿಡುಗಡೆ ಮಾಡುವ ಮಾಹಿತಿಯನ್ನು ಡಿಸಿಸಿ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರು ಸಹಕಾರ ಸಂಘಗಳ ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿ ತಂತ್ರಾಂಶದಲ್ಲಿ ನಮೂದು (Entry) ಮಾಡಲು ಕ್ರಮ ವಹಿಸಬೇಕು.

16. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಅಂದರೆ, ದಿನಾಂಕ: 01-04-2023 ರಿಂದ ದಿ:31-03-2024 ರವರೆಗೆ ನಬಾರ್ಡ್ ಸಂಸ್ಥೆಗೆ ಸಲ್ಲಿಸಿದ PLP (Potential Linked Plan) ಅನ್ವಯ ಅಲ್ಪಾವಧಿ ಕೃಷಿ ಸಾಲಗಳಿಗೆ ಮತ್ತು ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ ರೂ.23,000 ಕೋಟಿಗಳ ಸಾಲವನ್ನು 34.40 ಲಕ್ಷ ರೈತರಿಗೆ ವಿತರಿಸಲು ಗುರಿ ನಿಗದಿಪಡಿಸಲಾಗಿದೆ. ಸಾಲ ವಿತರಣೆಯಲ್ಲಿ 4.28 ಲಕ್ಷ ಹೊಸ ಸದಸ್ಯರಿಗೆ ಮತ್ತು ಒಟ್ಟಾರೆ ಸಾಲದ ಶೇ. 24.10ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪ್ರತ್ಯೇಕವಾಗಿ ಗುರಿ ನಿಗದಿಪಡಿಸತಕ್ಕದ್ದು ಹಾಗೂ ಜಿಲ್ಲೆಯಲ್ಲಿರುವ ಈ ವರ್ಗದ ರೈತರ ಅನುಪಾತಕ್ಕೆ ಕಡಿಮೆ ಇಲ್ಲದಂತೆ ಸಾಲ ವಿತರಿಸತಕ್ಕದ್ದು ಮತ್ತು ಯಾವುದೇ ವಿಧಾನ ಸಭಾ ಕ್ಷೇತ್ರಗಳಿಗೆ ತಾರತಮ್ಯ ಮಾಡಬಾರದು.

17. ಈ ಯೋಜನೆಯಲ್ಲಿ ಸಾಲ ವಿತರಿಸುವಾಗ ರೈತರಿಂದ ಯಾವುದೇ ತರಹದ ಬಲವಂತದ ವಂತಿಕೆಗಳನ್ನು ವಸೂಲು ಮಾಡತಕ್ಕದ್ದಲ್ಲ. ಹೊಸದಾಗಿ ಸಾಲ ಪಡೆಯುವಾಗ ಶೇರು ಮತ್ತು ಪ್ರವೇಶ ಶುಲ್ಕವನ್ನು ಮಾತ್ರ ಪಡೆಯತಕ್ಕದ್ದು ಹಾಗೂ ಹೊಸ ಸದಸ್ಯರಿಗೆ ಸಾಲ ವಿತರಿಸುವಾಗ ಸಂಘದ ಸದಸ್ಯತ್ವ, ಎನ್‌ಸಿಎಲ್ ಮತ್ತು ಸಾಲ ಮಂಜೂರಾತಿಯನ್ನು ಒಟ್ಟಿಗೆ ರೈತನು ಅರ್ಜಿ ಸಲ್ಲಿಸಿದ 15 ದಿನದೊಳಗಾಗಿ ಸಂಘದ ಆಡಳಿತ ಮಂಡಳಿಯ ಮತ್ತು ಡಿಸಿಸಿ ಬ್ಯಾಂಕಿನಿಂದ ಮಂಜೂರಾತಿ ಪಡೆದು ಸಾಲ ವಿತರಿಸತಕ್ಕದ್ದು.

18. ಸಹಕಾರ ಸಂಘಗಳ ನಿಬಂಧಕರು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅಗತ್ಯವಾದ ಮಾರ್ಗದರ್ಶನ ನೀಡಲು ಸಕ್ಷಮರಾಗಿರತಕ್ಕದ್ದು.

19. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡುವ ಸೂಚನೆಗಳನ್ನು ಸಂಬಂಧಿಸಿದ ಎಲ್ಲಾ ಸಹಕಾರ ಸಂಸ್ಥೆಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 71ವೆಚ್ಚ-2/2023, ದಿನಾಂಕ:02.09.2023 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: PDS/74/PFR/2023, ದಿನಾಂಕ:21.08.2023 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

8/9/23.

(ಎ.ಸಿ.ದಿವಾಕರ್)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

8-9-23

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 100 ಪ್ರತಿಗಳನ್ನು ಒದಗಿಸಲು ಕೋರಿದೆ.

Scanned by CamScanner

ಪ್ರತಿಗಳು :

1. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಮುಖ್ಯ ಕಾರ್ಯದರ್ಶಿಗಳು. ವಿಧಾನಸೌಧ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಜಿ ಎಸ್ ಎಸ್ ಎ)/ (ಇ ಆರ್ ಎಸ್ಎ) (ಎ ಇ), ಕರ್ನಾಟಕ ರಾಜ್ಯ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ,
7. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
8. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-04.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 2&10), ವಿಧಾನ ಸೌಧ, ಬೆಂಗಳೂರು.
10. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಉತ್ತುಂಗ, ನಂ.1, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು-18.
12. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು –ನಿಬಂಧಕರ ಮೂಲಕ
13. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು- ನಿಬಂಧಕರ ಮೂಲಕ
14. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು – ನಿಬಂಧಕರ ಮೂಲಕ
15. ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು.
16. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
17. ಆಂತರಿಕ ಆರ್ಥಿಕ ಸಲಹೆಗಾರರು, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ.
18. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ.
19. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ
20. ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
21. ರಾಜ್ಯ ಖಜಾನಾಧಿಕಾರಿ, ಜೆ.ಸಿ ರಸ್ತೆ, ಬೆಂಗಳೂರು
22. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿ

*****

Scanned by CamScanner

ಅನುಬಂಧ-೨

<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 822 ಕ್ಕೆ ಅನುಬಂಧ-1</u>

<u>ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಡಿಸಿಸಿ ಬ್ಯಾಂಕುಗಳ ಮೂಲಕ 3.00 ಲಕ್ಷದಿಂದ ರೂ.5.00 ಲಕ್ಷಗಳ ವರೆಗೆ 2023-24ನೇ ಸಾಲಿನಲ್ಲಿ ಮತ್ತು 2024-25 ನೇ ಸಾಲಿನಲ್ಲಿ ಸಾಲ ವಿತರಿಸಿದ ಮತ್ತು ಮರುಪಾವತಿಸಿದ ರೈತರ ವಿವ</u>

| ಕ್ರ.ಸಂ. | ಜಿಲ್ಲೆಯ ಹೆಸರು | 2023-24 | | 2024-25 | |
|---|---|---|---|---|---|
| | | ಸಾಲ ವಿತರಿಸಿದ ರೈತರ ಸಂಖ್ಯೆ | ಅವಧಿಯೊಳಗೆ ಸಾಲ ಮರುಪಾವತಿಸಿದ ರೈತರ ಸಂಖ್ಯೆ | ಸಾಲ ವಿತರಿಸಿದ ರೈತರ ಸಂಖ್ಯೆ | ಅವಧಿಯೊಳಗೆ ಸಾಲ ಮರುಪಾವತಿಸಿದ ರೈತರ ಸಂಖ್ಯೆ |
| 1 | ಬೆಂ. ನಗರ | 0 | 0 | 0 | ಸಾಲ ಮರುಪಾವತಿಸಲು ಒಂದು ವರ್ಷದ ಕಾಲಾವಕಾಶ ಇರುತ್ತದೆ. |
| 2 | ಬೆಂ.ಗ್ರಾಮಾಂತರ | 0 | 0 | 0 | |
| 3 | ರಾಮನಗರ | 0 | 0 | 0 | |
| 4 | ತುಮಕೂರು | 0 | 0 | 0 | |
| 5 | ಕೋಲಾರ | 215 | 202 | 210 | |
| 6 | ಚಿಕ್ಕಬಳ್ಳಾಪುರ | 178 | 175 | 166 | |
| 7 | ಚಿತ್ರದುರ್ಗ | 730 | 730 | 740 | |
| 8 | ದಾವಣಗೆರೆ | 0 | 0 | 0 | |
| 9 | ಶಿವಮೊಗ್ಗ | 98 | 98 | 2 | |
| 10 | ಬೆಳಗಾವಿ | 186 | 186 | 208 | |
| 11 | ವಿಜಯಪುರ | 112 | 112 | 628 | |
| 12 | ಬಾಗಲಕೋಟೆ | 0 | 0 | 0 | |
| 13 | ಧಾರವಾಡ | 34 | 28 | 0 | |
| 14 | ಗದಗ | 98 | 77 | 0 | |
| 15 | ಹಾವೇರಿ | 4 | 4 | 0 | |
| 16 | ಉತ್ತರ ಕನ್ನಡ | 18 | 18 | 420 | |
| 17 | ಮೈಸೂರು | 318 | 272 | 763 | |
| 18 | ಚಾಮರಾಜನಗರ | 42 | 36 | 116 | |
| 19 | ಮಂಡ್ಯ | 7 | 6 | 129 | |
| 20 | ಹಾಸನ | 1464 | 1464 | 1480 | |
| 21 | ಚಿಕ್ಕಮಗಳೂರು | 350 | 345 | 348 | |
| 22 | ಕೊಡಗು | 3353 | 3353 | 8301 | |
| 23 | ದಕ್ಷಿಣ ಕನ್ನಡ | 1390 | 1390 | 2006 | |
| 24 | ಉಡುಪಿ | 211 | 211 | 460 | |
| 25 | ಬೀದರ | 0 | 0 | 0 | |
| 26 | ಕಲಬುರಗಿ | 31 | 31 | 31 | |
| 27 | ಯಾದಗೀರ | 0 | 0 | 0 | |
| 28 | ರಾಯಚೂರು | 0 | 0 | 0 | |
| 29 | ಕೊಪ್ಪಳ | 0 | 0 | 0 | |
| 30 | ಬಳ್ಳಾರಿ | 0 | 0 | 0 | |
| 31 | ವಿಜಯನಗರ | 20 | 17 | 27 | |
| | ಒಟ್ಟು | 8859 | 8755 | 16043 | |

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)

13/8/25